CW-03
PW-08

**1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಯಚೂರು.**

ಸ್ಪೇಷಲ್ .ಕೇಸ್(ಎಸ್.ಸಿ./ಎಸ್.ಟಿ.) ಸಂಖ್ಯೆ 01/2026

ದಿ. 27-07-2026

(ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು )

ಚಾಸಾ-03
ಫ್ರಾಸಾ-08

| | |
|---|---|
| ಸಾಕ್ಷಿದಾರರ ಹೆಸರು | ಪವನ್ ಕಲ್ಯಾಣ್ |
| ತಂದೆಯ ಹೆಸರು | ಗೋಖರಪ್ಪ |
| ವಯಸ್ಸು | 25 ವರ್ಷ |
| ಉದ್ಯೋಗ | ರಾಯಚೂರು ಮಹಾನಗರ ಪಾಲಿಕೆಯ ಬಿಲ್ ಕಲೆಕ್ಟರ್ |
| ವಾಸಸ್ಥಳ | ರಾಯಚೂರು |

**ಮುಖ್ಯ ವಿಚಾರಣೆಃ ಸಾರ್ವಜನಿಕ ಅಭಿಯೋಜಕರಿಂದಃ-**

1. ನನಗೆ ಚಾಸಾ-1 ಮತ್ತು 2 ರವರು ಗೊತ್ತು. ದಿಃ 02-09-2025 ರಂದು, ಬೆಳಿಗ್ಗೆ 11 ರಿಂದ 11-45 ಗಂಟೆ ಸಮಯದಲ್ಲಿ ಸದರ್ ಬಜಾರ್ ಪೊಲೀಸ್ ಠಾಣೆಯಲ್ಲಿ ಚಾಸಾ-1 ರವರು ಹಾಜರುಪಡಿಸಿದ ಮೇರೆಗೆ ಒಂದು ರಕ್ತ ಹತ್ತಿದ ಅಂಗಿ ಮತ್ತು ಒಂದು ಕರ್ಚಿಪನ್ನು ನನ್ನ ಮತ್ತು ಚಾಸಾ-2 ರವರ ಸಮಕ್ಷಮ ಒಂದು ಜಪ್ತಿ ಪಂಚನಾಮೆಯನ್ನು ಮಾಡಿ ಅಮಾನತ್ತು ಪಡಿಸಿಕೊಂಡಿರುತ್ತಾರೆ. ಸದರಿ ಜಪ್ತಿ ಪಂಚನಾಮೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ-5 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-5(ಬಿ) ಎಂದು

CW-03
PW-08

ಗುರುತಿಸುತ್ತಾರೆ. ಅದೇ ಸಮಯದಲ್ಲಿ ನಿಪಿ-6 ಮತ್ತು 7 ರಂತೆ 2 ವರ್ಣ ರಂಜಿತ ಛಾಯಾ ಚಿತ್ರಗಳನ್ನು ತೆಗೆಸಿರುತ್ತಾರೆ. ಸದರಿ ರಕ್ತ ಹತ್ತಿದ T-Shirt ಮತ್ತು ಕರ್ಚಿಪನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ಮು.ಮಾ. 1 ಮತ್ತು 2 ಎಂದು ಗುರುತಿಸಿದ್ದು ಇರುತ್ತದೆ. ನಂತರ ಅದೇ ದಿನ ಮಧ್ಯಾಹ್ನ 12 ರಿಂದ 1 ಗಂಟೆಯ ಸಮಯದಲ್ಲಿ ಗಂಗಾ ನಿವಾಸದಲ್ಲಿರುವ ಗಣೇಶ್ ಕಟ್ಟೆಯ ಹತ್ತಿರ ಚಾಸಾ-1 ರವರ ಸ್ಥಳ ತೋರಿದ ಮೇರೆಗೆ, ನನ್ನ ಮತ್ತು ಚಾಸಾ-2 ರವರ ಸಮಕ್ಷಮ ಇನ್ನೊಂದು ಸ್ಥಳ ಪಂಚನಾಮೆಯನ್ನು ಮಾಡಿ 2 ಕಲ್ಲುಗಳನ್ನು ಜಪ್ತಿ ಮಾಡಿಕೊಂಡಿರುತ್ತಾರೆ. ಸದರಿ ಜಪ್ತಿ ಪಂಚನಾಮೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ-2 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-2(ಬಿ) ಎಂದು ಗುರುತಿಸುತ್ತಾರೆ. ಅದೇ ಸಮಯದಲ್ಲಿ ನಿಪಿ-3 ಮತ್ತು 4 ರಂತೆ 2 ವರ್ಣ ರಂಜಿತ ಛಾಯಾ ಚಿತ್ರಗಳನ್ನು ತೆಗೆಸಿರುತ್ತಾರೆ. ಸದರಿ 2 ಕಲ್ಲುಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅವುಗಳನ್ನು ಈಗಾಗಲೇ ಮು.ಮಾ.3 ಮತ್ತು 4 ಎಂದು ಗುರುತಿಸಿದ್ದು ಇರುತ್ತದೆ.

**ಪಾಟೀ ಸವಾಲು ಶ್ರೀ ಆರ್.ಕೆ. ವಕೀಲರಿಂದ ಆರೋಪಿತರ ಪರಃ**

2. ದಿಃ 02-09-2025 ರಂದು, ಬೆಳಿಗ್ಗೆ 11 ರಿಂದ 11-45 ಗಂಟೆ ಸಮಯದಲ್ಲಿ ಸದರ್ ಬಜಾರ್ ಪೊಲೀಸ್ ಠಾಣೆಯಲ್ಲಿ ಚಾಸಾ-1 ರವರು ಹಾಜರುಪಡಿಸಿದ ಮೇರೆಗೆ ಒಂದು ರಕ್ತ ಹತ್ತಿದ ಅಂಗಿ ಮತ್ತು ಒಂದು ಕರ್ಚಿಪನ್ನು ನನ್ನ ಮತ್ತು ಚಾಸಾ-2 ರವರ ಸಮಕ್ಷಮ ಒಂದು ಜಪ್ತಿ ಪಂಚನಾಮೆಯನ್ನು ಮಾಡಿ

CW-03
PW-08

ಅಮಾನತ್ತು ಪಡಿಸಿಕೊಂಡಿದ್ದಾರೆಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

3. ನಂತರ ಅದೇ ದಿನ ಮಧ್ಯಾಹ್ನ 12 ರಿಂದ 1 ಗಂಟೆಯ ಸಮಯದಲ್ಲಿ ಗಂಗಾ ನಿವಾಸದಲ್ಲಿರುವ ಗಣೇಶ್ ಕಟ್ಟೆಯ ಹತ್ತಿರ ಚಾಸಾ-1 ರವರ ಸ್ಥಳ ತೋರಿದ ಮೇರೆಗೆ, ನನ್ನ ಮತ್ತು ಚಾಸಾ-2 ರವರ ಸಮಕ್ಷಮ ಇನ್ನೊಂದು ಸ್ಥಳ ಪಂಚನಾಮೆಯನ್ನು ಮಾಡಿ 2 ಕಲ್ಲುಗಳನ್ನು ಜಪ್ತಿ ಮಾಡಿಕೊಂಡಿರುತ್ತಾರೆಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ಪೊಲೀಸಿನವರು ನನ್ನ ಸಮಕ್ಷಮ ಕೃತ್ಯ ನಡೆದ ಜಾಗದಲ್ಲಿ ಮತ್ತು ಗಂಗಾ ನಿವಾಸದಲ್ಲಿರುವ ಗಣೇಶ ಕಟ್ಟೆಯ ಹತ್ತಿರ ಯಾವುದೇ ಪೋಟೋಗಳನ್ನು ತೆಗೆಸಿಲ್ಲ ಮತ್ತು ನನ್ನ ಸಮಕ್ಷಮ ಯಾವುದೇ ವಸ್ತುಗಳನ್ನು ಅಮಾನತ್ತು ಪಡಿಸಿಕೊಂಡಿಲ್ಲ ಎನ್ನುವುದು ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ.

(ಮಾಲ ಎನ್.ಡಿ.)
1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ರಾಯಚೂರು.